# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 11.06.2022ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2022ನೇ ಸಾಲಿನ ಚತುರ್ಥ ವಿಶೇಷ ಸಭೆಯ ನಡವಳಿಗಳು.**

**ಉಪಸ್ಥಿತರು:**

| ಕ್ರ. ಸಂ. | | | ಸಹಿ |
|---|---|---|---|
| 1. | ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ. ಜೆನಿಫರ್ ಲೋಲಿಟಾ ಸಿ.,<br>ಜಂಟಿ ನಿರ್ದೇಶಕರು,<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಪ್ರೊ. ಕರುಣಾಕರ್ ಎ. ಕೋಟೆಗಾರ್ | ಸದಸ್ಯರು | |
| 4. | ಶ್ರೀ ರವಿಚಂದ್ರ ಪಿ.ಎಂ. | ಸದಸ್ಯರು | |
| 5. | ಡಾ. ಜೆರಾಲ್ಡ್ ಸಂತೋಷ್ ಡಿ'ಸೋಜ,<br>ಡೀನರು | ಸದಸ್ಯರು | |
| 6. | ಡಾ. ಶಂಕರ ಭಟ್ ಪಿ. | ಸದಸ್ಯರು | |
| 7. | ಶ್ರೀ ಮೋಹನ್ ನಾಯ್ಕ್ | ಸದಸ್ಯರು | |
| 8. | ಶ್ರೀಮತಿ ಸುಭಾಶಿಣಿ ಶ್ರೀವತ್ಸ | ಸದಸ್ಯರು | |
| 9. | ಶ್ರೀ ಕೆ. ರಮೇಶ<br>(Online ಮೂಲಕ) | ಸದಸ್ಯರು | |
| 10. | ಶ್ರೀ ವಿವೇಕಾನಂದ ಪನಿಯಾಳ | ಸದಸ್ಯರು | |
| 11. | ಶ್ರೀ ರವೀಂದ್ರನಾಥ ರೈ | ಸದಸ್ಯರು | |
| 12. | ಡಾ. ಎಂ. ಎಸ್. ತಳವಾರ | ಸದಸ್ಯರು | |
| 13. | ಶ್ರೀ ಮೋಹನ್ ಪಡಿವಾಳ್ | ಸದಸ್ಯರು | |
| 14. | ಡಾ. ಎ. ಪಾರ್ವತಿ ಅಪ್ಪಯ್ಯ | ಸದಸ್ಯರು | |
| 15. | ಪ್ರೊ. ವಿಶ್ವನಾಥ್. ಪ್ರಾಧ್ಯಾಪಕರು | ಸದಸ್ಯರು | |
| 16. | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ<br>(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 17. | ಪ್ರೊ. ಪಿ. ಎಲ್. ಧರ್ಮ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 18. | ಪ್ರೊ. ಕೆ. ಎಸ್.ಜಯಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |
| 19. | ಪ್ರೊ. ಕಿಶೋರ್ ಕುಮಾರ್ ಸಿ. ಕೆ.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

## ➢ ಸ್ವಾಗತ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಎಫ್) ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ಪ್ರಾಂಶುಪಾಲರುಗಳನ್ನು ಮಾನ್ಯ ಕುಲಸಚಿವರು ಸಭೆಗೆ ಸ್ವಾಗತಿಸಿದರು.

1. ಶ್ರೀ ಮೋಹನ್ ನಾಯ್ಕ್, ಪ್ರಾಂಶುಪಾಲರು, ಕರಾವಳಿ ಕಾಲೇಜು, ಮಂಗಳೂರು
2. ಶ್ರೀ ಲೆವಿನ್ ಡಿ'ಸೋಜ, ಪ್ರಾಂಶುಪಾಲರು, ಉಡುಪಿ ಇನ್ಸಿಟ್ಯೂಟ್ ಆಫ್ ಹೊಟೇಲ್ & ಟೂರಿಸಂ ಸೈನ್ಸ್, ಮಣಿಪಾಲ.

## ➢ ಕೃತಜ್ಞತೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಎಫ್) ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ನಾಮನಿರ್ದೇಶನಗೊಂಡಿದ್ದ ಫಾದರ್ ಆಲ್ವಿನ್ ಸೆರಾವೋ, ಪ್ರಾಂಶುಪಾಲರು, ಸ್ಯೆಂಟ್ ಆಂಟನಿ ಕಾಲೇಜ್ ಆಫ್ ಕಾಮರ್ಸ್, ನಾರಾವಿ ಪೋಸ್ಟ್, ಬೆಳ್ತಂಗಡಿ ತಾಲೂಕು ಇವರ ಸದಸ್ಯತ್ವದ ಅವಧಿಯು ದಿನಾಂಕ 23.05.2022ರಂದು ಕೊನೆಗೊಂಡಿದ್ದು, ಸದರಿಯವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

ಇವರು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಸಿಂಡಿಕೇಟು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## 1. ನಡವಳಿಗಳ ದೃಢೀಕರಣ

1. ದಿನಾಂಕ 16.05.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

ದಿನಾಂಕ 16.05.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.4:22(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

**ತಿದ್ದುಪಡಿ ನಿರ್ಣಯ:** ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ಖಾಯಂ ಬೋಧಕರ ನೇಮಕಾತಿ ಬಳಿಕ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿಯನ್ನು ಮಾಡಲು ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಪ್ರಸ್ತುತ ಸ್ನಾತಕೋತ್ತರ ಭೂಗೋಳಶಾಸ್ತ್ರ ಕಾರ್ಯಕ್ರಮದ ಸಂಯೋಜಕರಾಗಿರುವ ಡಾ. ದಶರಥ ಪಿ. ಅಂಗಡಿ, ಸಹ ಪ್ರಾಧ್ಯಾಪಕರು ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇವರಿಗೆ ವಿಭಾಗದ ಸಂಯೋಜಕರಾಗಿ ಸ್ವತಂತ್ರವಾಗಿ ಮುಂದುವರಿಸುವಂತೆ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

## I. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:

**ಕಾರ್ಯಸೂಚಿ ಸಂಖ್ಯೆ:** ಡೀವಿ:ವಿಸ.4:01(2022)

**ವಿಷಯ:** ಅಷ್ಟಾದಶಿ ಪ್ರಾಜೆಕ್ಟ್ ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ – ಸಿಂಡಿಕೇಟ್ ಸಭೆಯ ಅನುಮೋದನೆ ಹಾಗೂ ಸದಸ್ಯರ ಸಹಿ ಪಡೆಯುವ ಬಗ್ಗೆ.

**ನಿರ್ಣಯ:** ಪ್ರಥಮವಾಗಿ ಉತ್ತಮ ಪ್ರಾಜೆಕ್ಟ್‌ಗೆ ಸಂಬಂಧಿಸಿ, ಅನುದಾನವನ್ನು ಪಡೆದುಕೊಳ್ಳಲು ಪ್ರಯತ್ನಿಸಿದ ಪ್ರೊ. ಕೆ. ಕೃಷ್ಣ ಶರ್ಮ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಸಿಂಡಿಕೇಟು ಸಭೆಯು ಅಭಿನಂದಿಸಿತು.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಿ ಅನುಮೋದಿಸಲಾಯಿತು.

ಮುಂದುವರಿದು, ಸದರಿ ಪ್ರಾಜೆಕ್ಟ್‌ನ ಅನುಷ್ಠಾನದ ಬಗ್ಗೆ ಮಾನ್ಯ ಕುಲಪತಿಗಳಿಗೆ ಮತ್ತು ಕುಲಸಚಿವರಿಗೆ ಪೂರ್ಣ ಪ್ರಮಾಣದ ಹೊಣೆಗಾರಿಕೆಯೊಂದಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:02(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ವೈದ್ಯರೊಬ್ಬರ ಸೇವೆಯನ್ನು ಒಡಂಬಡಿಕೆ (MOU) ಮೂಲಕ ಪಡೆಯುವ ಬಗ್ಗೆ.

**ನಿರ್ಣಯ:** ಡಾ. ಪಾಟ್ರಿಕ್ ಡಿ' ಸೋಜ ಇವರನ್ನು ತಾತ್ಕಾಲಿಕ ನೆಲೆಯಲ್ಲಿ ಆರೋಗ್ಯ ಕೇಂದ್ರದಲ್ಲಿ Consultant ಆಗಿ ನಿಯೋಜಿಸುವಂತೆ ಸಿಂಡಿಕೇಟು ನಿರ್ಣಯಿಸಿತು. ಯೇನೆಪೋಯ ವಿಶ್ವವಿದ್ಯಾನಿಲಯ (ಡೀಮ್ಡ್ ವಿ.ವಿ.) ಇವರೊಂದಿಗಿನ ಒಡಂಬಡಿಕೆ (MOU) ಯ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:03(2022)

**ವಿಷಯ:** ವಿವಿಧ ಬೋಧಕ/ಇತರ ಶೈಕ್ಷಣಿಕ ಹುದ್ದೆಗಳ ನೇಮಕಾತಿ / ಪದೋನ್ನತಿಗೆ ಸಂಬಂಧಿಸಿ ಪರಿಷ್ಕೃತ ಆಯ್ಕೆ ಸಮಿತಿ ರಚನೆಗೆ ಸಂಬಂಧಿಸಿ, ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:04(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಜೀವ ರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎ. ಹೆಚ್. ಸ್ನೇಹರಾಣಿ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ಖಾಲಿಯಿರುವ ಹುದ್ದೆಗೆ ವರ್ಗಾಯಿಸುವ ಕುರಿತು ಸರ್ಕಾರಕ್ಕೆ ವಿಶ್ವವಿದ್ಯಾನಿಲಯದ ಅಭಿಪ್ರಾಯ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:05(2022)

**ವಿಷಯ:** ಘಟಕ ಕಾಲೇಜಿನಿಂದ ಬೋಧಕ ಸಿಬ್ಬಂದಿಯ ವರ್ಗಾವಣೆ ಕೋರಿಕೆ ಬಗ್ಗೆ.

**ನಿರ್ಣಯ:** ಸದರಿಯವರ ಮನವಿಯನ್ನು ಸಿಂಡಿಕೇಟು ತಿರಸ್ಕರಿಸಿ, ಪ್ರಸ್ತಾವನೆಯನ್ನು ಕೈಬಿಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:06(2022)

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು, ಮಂಗಳೂರು ವಿಶ್ವವಿದ್ಯಾನಿಲಯ ಇವರು ಸಲ್ಲಿಸಿದ ಪ್ರಸ್ತಾವನೆಗೆ ಸಂಬಂಧಿಸಿ ದಿನಾಂಕ 13.04.2022ರ ಸಿಂಡಿಕೇಟು ಸಭೆಯ ಕಾರ್ಯಸೂಚಿ ಸಂಖ್ಯೆ ಸಿಂಡಿಕೇಟುವಿ.ಸ. 2:12(2022)ರ ನಿರ್ಣಯದಂತೆ ಘಟಕ ಕಾಲೇಜುಗಳ ಶಿಕ್ಷಕರುಗಳ ವರ್ಗಾವಣೆಗೆ ಸಂಬಂಧಿಸಿ ಸಮಗ್ರ ವರದಿಯೊಂದಿಗೆ ಸಿಂಡಿಕೇಟು ಸಭೆಗೆ ಪ್ರಸ್ತಾವನೆ.

**ನಿರ್ಣಯ:** ಸಮರ್ಪಕ ಮತ್ತು ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟಿನ ಸಾಮಾನ್ಯ ಸಭೆಗೆ ಮಂಡಿಸಲು ತಿಳಿಸಿ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:07(2022)

**ವಿಷಯ:** ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಮತ್ತು ದೂರಶಿಕ್ಷಣ ಕೇಂದ್ರ ಮಂಗಳೂರು ಇಲ್ಲಿನ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ಲೋಪ ದೋಷಗಳ ಬಗ್ಗೆ ತನಿಖೆ ನಡೆಸಲು ಎ.ಸಿ.ಬಿ.ಗೆ ನೀಡುವ ದೂರು ಪತ್ರದ ಕರಡು ಅನುಮೋದನೆ ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಲಭ್ಯ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಶ್ರೀ ನವೀನ್ ಇವರು ಹಣದ ದುರುಪಯೋಗ ನಡೆಸಿರುವುದು ಕಂಡುಬರುತ್ತದೆ. ಆದರೆ, ಸಂಬಂಧಿತ ಅಧಿಕಾರಿಗಳು ಆಡಳಿತ ಸಂಬಂಧ ನಿರ್ಲಕ್ಷ್ಯ ವಹಿಸಿ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುವುದರಿಂದ ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಬಂಧಿತ ಅಧಿಕಾರಿಗಳಿಂದ ವಿಶ್ವವಿದ್ಯಾನಿಲಯಕ್ಕೆ ಉಂಟಾದ ಆರ್ಥಿಕ ನಷ್ಟವನ್ನು ನಿಗದಿಪಡಿಸಿದ ನಂತರ ಸದರಿ ಮೊತ್ತವನ್ನು ಮರುಭರಣೆ ಮಾಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:08(2022)

**ವಿಷಯ:** ಡಾ. ಅನಿತಾ ರವಿಶಂಕರ್, ಸಮಾಜಶಾಸ್ತ್ರದ ಸಹ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ಮಂಗಳೂರು ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ – ಅಪರಾಧ ನಿರ್ಣಯದ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ವಿಸ.4:09(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ರವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲು ಪ್ರತಿಮೆಯನ್ನು ಒದಗಿಸಿಕೊಡುವ ಕಾಮಗಾರಿಯ Expression of Interest (E.O.I.) ನ ಅಂದಾಜುಪಟ್ಟಿಗೆ ಘಟನೋತ್ತರ ಅನುಮೋದನೆ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ವಿಸ.4:10(2022)

**ವಿಷಯ:** Construction of Ladies Toilets at FMKMC College Campus Madikeri, Kodagu Dist- ಟೆಂಡರು ಅನುಮೋದನೆ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ವಿಸ.4:11(2022)

**ವಿಷಯ:** ಫೀ. ಮಾ. ಕೆ. ಎಂ. ಕಾರ್ಯಪ್ಪ ಕಾಲೇಜು ಮಡಿಕೇರಿ ಇಲ್ಲಿಯ ನಿವೇಶನಕ್ಕೆ ಆವರಣ ಗೋಡೆ ನಿರ್ಮಿಸುವ ಕಾಮಗಾರಿ– ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ವಿಸ.4:12(2022)

**ವಿಷಯ:** Main Gate for Administrative Building at Mangalore University Campus – ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ವಿಸ.4:13(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಸಿ ಮಾದರಿ ವಸತಿಗೃಹ ಸಂಖ್ಯೆ 2,3,4, 26, 27ರ ನಿರ್ವಹಣಾ ಕಾಮಗಾರಿ – ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ವಿಸ.4:14(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಡಾ. ಬಿ. ಆರ್. ಅಂಬೇಡ್ಕರ್‌ರವರ ಕಂಚಿನ ಪ್ರತಿಮೆಯನ್ನು ಸ್ಥಾಪಿಸಲು ಪ್ರತಿಮೆಯನ್ನು ಒದಗಿಸಿಕೊಡುವ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ:ವಿಸ.4:15(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ಶಿಕ್ಷಕರುಗಳಿಗೆ ಲ್ಯಾಪ್‌ಟಾಪ್ ಒದಗಿಸುವ ಬಗ್ಗೆ.
**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ವಿಸ.4:16(2022)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Yenepoya Deemed to be University, ದೇರಳಕಟ್ಟೆ, ಮಂಗಳೂರು ಇವರೊಂದಿಗೆ **ಒಡಂಬಡಿಕೆ** ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.
**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ. ಘಟಕ:ವಿಸ.4:17(2022)
**ವಿಷಯ:** ಪರಿಶಿಷ್ಟ ಜಾತಿ / ಪಂಗಡದ ವಿದ್ಯಾರ್ಥಿಗಳಿಗೆ ವಿತರಿಸಬೇಕಾದ ಲ್ಯಾಪ್‌ಟಾಪ್‌ಗಳ ಖರೀದಿ ಬಗ್ಗೆ.
**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:18(2022)
**ವಿಷಯ:** ಡಾ. ಎಸ್. ತಿಪ್ಪೇಸ್ವಾಮಿ ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ 1318/2016 **(ಪಿಐಎಲ್)** ಜಿಎಂ(ಆರ್‌ಇಎಸ್) – ಸೇವಾ ದೃಢೀಕರಣ ನೀಡುವ ಬಗ್ಗೆ.
**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ವಿಸ.4:19(2022)
**ವಿಷಯ:** ಡಾ. ಎಸ್. ತಿಪ್ಪೇಸ್ವಾಮಿ ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ **31446/2015** ಜಿಎಂ(ಆರ್‌ಇಎಸ್) – ಸೇವಾ ದೃಢೀಕರಣ ನೀಡುವ ಬಗ್ಗೆ.
**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ವಿಸ.4:20(2022)
**ವಿಷಯ:** ಪ್ರೊ. ಕರುಣಾಕರ್ ಎ. ಕೋಟೆಗಾರ್, ಸಿಂಡಿಕೇಟು ಸದಸ್ಯರು ಇವರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ವಿಸ.4:21(2022)
**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟು ಸದಸ್ಯರು ಇವರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.
**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ವಿಸ.4:22(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಭದ್ರತಾ ವ್ಯವಸ್ಥೆಗೆ ಸಂಬಂಧಿಸಿ ವ್ಯತ್ಯಾಸದ ಮೊತ್ತವನ್ನು ಭದ್ರತಾ ಸಿಬ್ಬಂದಿಗಳಿಗೆ ಪಾವತಿಸುವ ಬಗ್ಗೆ.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ:ವಿಸ.4:23(2022)

**ವಿಷಯ:** ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ 1081/2021 ರಲ್ಲಿ ವಾದ ಕಾಲೀನ ಅರ್ಜಿಗೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶ ದಿನಾಂಕ 05.04.2022 ರ ಕುರಿತು ನ್ಯಾಯವಾದಿ ಅರುಣ್ ಶ್ಯಾಮ್ ಅಸೋಸಿಯೇಟ್ಸ್ ಇವರು ನೀಡಿರುವ ಕಾನೂನು ಅಭಿಪ್ರಾಯದ ಕುರಿತು.

**ನಿರ್ಣಯ:** ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ:ವಿಸ.4:24(2022)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ವಜೀದಾ ಬಾನೋ, ಡಾ. ದಯಾನಂದ ನಾಯ್ಕ್ ಮತ್ತು ಡಾ. ನಾಗಪ್ಪ ಗೌಡ ಆರ್. ಇವರನ್ನು ಅವರು ಮೂಲತಃ ನೇರ ನೇಮಕಗೊಂಡಿದ್ದ ಘಟಕ ಕಾಲೇಜುಗಳಿಗೆ ಮರು ವರ್ಗಾವಣೆಗೊಳಿಸಲು ದಿನಾಂಕ 27.08.2021ರ ಸಿಂಡಿಕೇಟು ಸಭೆಯಲ್ಲಿ ಕೈಗೊಂಡಿರುವ ನಿರ್ಣಯವನ್ನು ರದ್ದುಗೊಳಿಸುವಂತೆ ಸದರಿಯವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಇತರರ ವಿರುದ್ಧ ಹೂಡಿರುವ ರಿಟ್ ಅರ್ಜಿ ಸಂಖ್ಯೆ: 17243/2021ಗೆ ಸಂಬಂಧಿಸಿದಂತೆ ಪ್ರಸಕ್ತ ಸ್ಥಿತಿಗತಿ.

**ನಿರ್ಣಯ:** ಪ್ರಸ್ತಾವನೆಯನ್ನು ಚರ್ಚಿಸಲಾಯಿತು. ದಿನಾಂಕ 13.09.2021ರ ಸಿಂಡಿಕೇಟು ಸಭೆಯಲ್ಲಿ ಸದರಿ ನಾಲ್ಕು ಜನ ಶಿಕ್ಷಕರುಗಳನ್ನು ಸಂಬಂಧಿತ ಘಟಕ ಕಾಲೇಜುಗಳಿಗೆ ವರ್ಗಾವಣೆ ಮಾಡಲು ಸಿಂಡಿಕೇಟು ನಿರ್ಣಯಿಸಿದ್ದರೂ ಈ ವರೆಗೆ ವರ್ಗಾವಣೆಯಾಗದಿರುವ ಬಗ್ಗೆ ಸಿಂಡಿಕೇಟು ಸದಸ್ಯರುಗಳು ತಮ್ಮ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದರು.

ಈ ಬಗ್ಗೆ ಕುಲಸಚಿವರು ವಿವರಿಸುತ್ತಾ, ದಿನಾಂಕ 13.09.2021ರಂದು ನಡೆದ ಸಿಂಡಿಕೇಟು ಸಭೆಯ ಇತರ ವಿಷಯಗಳ ಕ್ರಮ ಸಂಖ್ಯೆ 1ರಲ್ಲಿ ದಿನಾಂಕ 27.08.2021ರ ಸಿಂಡಿಕೇಟು ಸಭೆಯು ದಿನಾಂಕ 23.04.2021ರಂದು ನಡೆದ ಸಿಂಡಿಕೇಟು ಸಭೆಯ ಅನುಸರಣಾ ವರದಿಯನ್ನು ಅನುಮೋದಿಸುವ ಸಂದರ್ಭದಲ್ಲಿ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ.3:33(2021)ರ ನಿರ್ಣಯಕ್ಕೆ ಸಂಬಂಧಿಸಿ, ಹೆಚ್ಚುವರಿಯಾಗಿ ಪ್ರಸ್ತಾವನೆಯಲ್ಲಿ ನಮೂದಿಸಿರುವ ನಾಲ್ಕು ಜನ ಶಿಕ್ಷಕರುಗಳನ್ನು ಮೂಲತಃ ನೇಮಕಾತಿಗೊಂಡಿರುವ ಘಟಕ ಕಾಲೇಜುಗಳಿಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಬೇಕೆಂಬುದಾಗಿ ನಿರ್ದೇಶಿಸಿರುತ್ತದೆ. ಆದುದರಿಂದ ಕುಲಸಚಿವರ ಕಛೇರಿ ಆದೇಶ ದಿನಾಂಕ 15.09.2021ರಲ್ಲಿ ಸದರಿ ನಾಲ್ಕು ಜನ ಶಿಕ್ಷಕರುಗಳನ್ನು ಮೂಲತಃ ನೇಮಕಾತಿಯಾದ ಘಟಕ ಕಾಲೇಜುಗಳಿಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ. ತದನಂತರ ನ್ಯಾಯಾಲಯದ ಮಧ್ಯಂತರ ಆದೇಶಗಳನುಸಾರ ಮುಂದಿನ ವಿಚಾರಣೆವರೆಗೆ ವರ್ಗಾವಣೆಗೆ ತಡೆಯಾಜ್ಞೆ ಇರುತ್ತದೆ.

ಮುಂದುವರಿದು, ಈ ಬಗ್ಗೆ ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

ಈ ಸಭೆಯಲ್ಲಿ ಮುಂದೂಡಿದ ಕಾರ್ಯಸೂಚಿಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಹಾಜರಾಗಬೇಕೆಂಬುದಾಗಿ ಕುಲಸಚಿವರು ಸದಸ್ಯರುಗಳಲ್ಲಿ ಮನವಿ ಮಾಡಿಕೊಂಡರು.

**ಇತರ ವಿಷಯಗಳು:**

1. ಸಿಂಡಿಕೇಟಿನ ಮಾನ್ಯ ಸದಸ್ಯರಾದ ಶ್ರೀ ಮೋಹನ್ ಪಡಿವಾಳ್, ಇವರು ವಿಶ್ವವಿದ್ಯಾನಿಲಯದಲ್ಲಿ ಕೈಗೆತ್ತಿಕೊಂಡಿರುವ Double Entry System of Book Keeping ನ ಕುಂಠಿತ ಪ್ರಗತಿಯ ಬಗ್ಗೆ ಮತ್ತು ತತ್ಸಂಬಂಧ ವಿಶ್ವವಿದ್ಯಾನಿಲಯದಿಂದ ಸ್ವೀಕೃತವಾದ ಮಾಹಿತಿಯನ್ನು ಸವಿಸ್ತಾರವಾಗಿ ಸಭೆಗೆ ತಿಳಿಸಿದರು.

   ಈ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡುತ್ತಾ ಸದರಿ ಪ್ರಕ್ರಿಯೆಗೆ ವಿಶ್ವವಿದ್ಯಾನಿಲಯ ಆರಂಭದ 1980ರ ದಾಖಲೆಗಳನ್ನು ಕ್ರೂಢೀಕರಿಸಬೇಕಾಗಿರುವುದರಿಂದ ವಿಳಂಬವಾಗಿರುವುದಾಗಿ ತಿಳಿಸಿದರು. ಹಣಕಾಸು ಅಧಿಕಾರಿಯವರಾದ ಪ್ರೊ. ಕೆ. ಎಸ್. ಜಯಪ್ಪ ಇವರು ವಿಳಂಬವಾಗಿರುವುದಕ್ಕೆ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಸಭೆಗೆ ವಿವರಿಸಿದರು.

   ಅಂತಿಮವಾಗಿ ಕುಲಸಚಿವರು (ಆಡಳಿತ) ಮತ್ತು ಹಣಕಾಸು ಅಧಿಕಾರಿಯವರು ಜಂಟಿಯಾಗಿ ಈ ಬಗ್ಗೆ ಕಾರ್ಯಾಚರಿಸಿ ಶೀಘ್ರದಲ್ಲಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಹಾಗೂ ಇತರೇ ಎಲ್ಲಾ ತಾತ್ಕಾಲಿಕ ನೆಲೆಯ ಸಿಬ್ಬಂದಿಗಳಿಗೆ ಪ್ರತೀ ತಿಂಗಳ 10ನೇ ತಾರೀಕಿನ ಒಳಗೆ ಸಂಭಾವನೆಯನ್ನು ಪಾವತಿಸಬೇಕೆಂಬುದಾಗಿ ಈ ಹಿಂದಿನ ಸಿಂಡಿಕೇಟು ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಪಾಲಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

   ಅತಿಥಿ ಉಪನ್ಯಾಸಕರು ಹಾಗೂ ಇತರೇ ಎಲ್ಲಾ ತಾತ್ಕಾಲಿಕ ನೆಲೆಯ ಸಿಬ್ಬಂದಿಗಳ ಬಿಲ್ಲುಗಳನ್ನು ಸಂಬಂಧಿತ ವಿಭಾಗ / ಕಾಲೇಜುಗಳಿಂದಲೇ ಕ್ರೋಡೀಕರಿಸಿಕೊಂಡು ಪ್ರತೀ ತಿಂಗಳ 3ನೇ ತಾರೀಕಿನೊಳಗಾಗಿ ಪಾವತಿಗೆ ಸಲ್ಲಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

   ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಕೋವಿಡ್ 2019 ರ ಲಾಕ್ ಡೌನ್ ಅವಧಿಯಲ್ಲಿನ ನಾಲ್ಕು ತಿಂಗಳುಗಳ ವೇತನವನ್ನು ಪಾವತಿಸಿರುವ ವಿವರಗಳ ಬಗ್ಗೆ ಸಿಂಡಿಕೇಟು ಸದಸ್ಯರಾದ ಶ್ರೀ ಕೆ. ರಮೇಶ್ ಇವರು ಪ್ರಸ್ತಾಪಿಸಿದರು. ಈ ಬಗ್ಗೆ ಹಣಕಾಸು ಅಧಿಕಾರಿಗಳು ಮಾತನಾಡುತ್ತಾ ಈಗಾಗಲೇ ಸದರಿ ನಾಲ್ಕು ತಿಂಗಳುಗಳ ಅವಧಿಯ ವೇತನದಲ್ಲಿ ಒಂದು ತಿಂಗಳ ವೇತನವನ್ನು ಪಾವತಿಸಲಾಗಿರುವ ವಿಷಯವನ್ನು ಸಭೆಗೆ ತಿಳಿಸಿದರು. ಮುಂದಿನ ಮೂರು ತಿಂಗಳುಗಳಲ್ಲಿ ಪ್ರತೀ ತಿಂಗಳ ಸಂಭಾವನೆ ಜೊತೆಗೆ ಉಳಿದ ಮೂರು ತಿಂಗಳುಗಳ ವೇತನವನ್ನು ಪಾವತಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮಾನ್ಯ ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |